**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ಸಿ.ಸಿ. ಸಂಃ 3741/2022**

| | | |
|---|---|---|
| ಸಾಕ್ಷಿಯ ಹೆಸರುಃ | ಕುಮಾರ | ಫ್ರಾಸಾಃಃ 3 |
| ತಂದೆಯ ಹೆಸರುಃ | ಕರಿಗೌಡ | ಚಾಸಾಃಃ 2 |
| ವಯಸ್ಸುಃ | 25 ವರ್ಷ | ಪ್ರಮಾಣೀಕರಿಸಿದ ದಿಃ 23.07.2025. |
| ಉದ್ಯೋಗಃ | ಜೆ.ಸಿ.ಬಿ ಆಪರೇಟರ್ | |
| ವಾಸ ಸ್ಥಳಃ | ನವಿಲೂರು ಗ್ರಾಮ, ಪಿರಿಯಾಪಟ್ಟಣ ತಾ. | |

**ಮುಖ್ಯ ವಿಚಾರಣೆಃ** ಮಾನ್ಯ **ಸಸಅ ರವರಿಂದಃ**

1. ಈಗ ಮೂರು ವರ್ಷದ ಹಿಂದೆ ನಾನು ನನ್ನ ಟಾಟಾ ಎಸ್ ವಾಹನದಲ್ಲಿ ವಿರುಪಾಕ್ಷರವರ ತೋಟದ ಬಳಿ ಹೋಗುತ್ತಿದ್ದಾಗ, ನನ್ನ ಮುಂದೆ ಮೈಲಾರಿಗೌಡರು ಕುಶಾಲನಗರ ಕಡೆಗೆ ಕೆಎ.03.ಹೆಚ್ಎ.3609 ರ ಸ್ಕೂಟರ್ ನಲ್ಲಿ ಹೋಗುತ್ತಿದ್ದರು, ಆಗ ಕುಶಾಲನಗರ ಕಡೆಯಿಂದ ಕೆಎ.11.ಎಂ.3749 ರ ಅಲ್ಟೋ ಕಾರನ್ನು ಅದರ ಚಾಲಕ ಅತೀವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು, ಮೈಲಾರಿಗೌಡರ ಬೈಕಿಗೆ ಡಿಕ್ಕಿಪಡಿಸಿತು.

2. ಆರೋಪಿ ಪಿರಿಯಾಪಟ್ಟಣ ಠಾಣೆಗೆ ಹೋದರು. ನಂತರ ನಾನು ನನ್ನ ವಾಹನದಲ್ಲಿ ಮೈಲಾರಿಗೌಡರನ್ನು ಕರೆದುಕೊಂಡು ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ಹೋದೆ. ನಂತರ ಮೈಲಾರಿಗೌಡರನ್ನು ಒಂದು ಅಂಬ್ಯುಲನ್ಸ್ ನಲ್ಲಿ ಮೈಸೂರಿನ ಆಸ್ಪತ್ರೆಗೆ ಕಳುಹಿಸಿದೆ. ಆಗ ಮಾರ್ಗ ಮಧ್ಯೆ ಕಂಪಲಾಪುರ ಗ್ರಾಮದ ಬಳಿ ಮೃತರಾಗಿರುತ್ತಾರೆ ಎಂಬ ವಿಚಾರ ತಿಳಿಯಿತು. ನಂತರ ನಾನು ಪೊಲೀಸ್ ಠಾಣೆಗೆ ಹೋದೆ. ನಾನು ಪೊಲೀಸರಿಗೆ ಘಟನೆ ಬಗ್ಗೆ ಹೇಳಿಕೆ ನೀಡಿರುತ್ತೇನೆ.

3. ಸಾಕ್ಷಿ ಮಹಜರ್ ನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಮಹಜರನ್ನು ಈಗಾಗಲೇ ನಿಪಿ - 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ- 2(ಬಿ) ಎಂದು ಗುರುತಿಸಲಾಯಿತು.

4. ಸಾಕ್ಷಿ ಕಚ್ಚಾ ನಕಾಶೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಪೊಲೀಸರು ನನ್ನಿಂದ ಪೊಲೀಸ್ ಠಾಣೆಯಲ್ಲಿ ಹಾಗೂ ಮನೆಯ ಬಳಿ ಸಹಿಗಳನ್ನು ಪಡೆದಿದ್ದು, ನಿಪಿ - 2 ಮತ್ತು 3 ಕ್ಕೆ ಎಲ್ಲಿ ಸಹಿ ಮಾಡಿರುತ್ತೇನೆ ಎಂದು ನೆನಪಿಲ್ಲ.

5. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**(ಈ ಸಮಯದಲ್ಲಿ ಸಹಾಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು.)**

<u>ಪಾಟೀ ಸವಾಲುಃ ಸಸಅ ರವರಿಂದಃ</u>

1. ದಿಃ 26.04.2022 ರಂದು ಅಪಘಾತವಾಗಿದೆ ಎಂದರೆ ನೆನಪಿಲ್ಲ. ನೀವು ಆ ದಿನ ಬೈಕಿನಲ್ಲಿ ಹೋಗುತ್ತಿದ್ದು, ಟಾಟಾ ಏಸ್ ನಲ್ಲಿ ಅಲ್ಲ ಎಂದರೆ ಸರಿಯಲ್ಲ.

2. ನನ್ನ ಬೈಕಿನಲ್ಲಿ ನಾನು ಹೋಗುತ್ತಿದ್ದಾಗ, ನನ್ನ ಮುಂದೆ ಮಣಿಕಂಠ ಹಾಗೂ ಪ್ರತಾಪ ರವರು ಅವರ ಬೈಕಿನಲ್ಲಿ ಬರುತ್ತಿದ್ದರು ಎಂದು ಹೇಳಿಕೆ ನೀಡಿದ್ದೀರಾ ಎಂದರೆ, ಸರಿಯಲ್ಲ.

3. ಅಪಘಾತವಾದ ತಕ್ಷಣ ನಾನು ಹೋಗಿ ನೋಡಿ, ಮೈಲಾರಿಗೌಡರನ್ನು ಎತ್ತಿ ಸುಧಾರಿಸಿದೆವು ಎಂದರೆ ಸರಿ. ಆ ಸಮಯದಲ್ಲಿ ಪ್ರತಾಪ ಹಾಗೂ ಮಣಿಕಂಠ ರವರು ಸಹ ಬಂದರು ಎಂದು ಹೇಳಿಕೆ ನೀಡಿದ್ದೀರಾ ಎಂದರೆ ನನಗೆ ಗೊತ್ತಿಲ್ಲ.

6. ಮೈಲಾರಿಗೌಡರವರಿಗೆ ತಲೆಗೆ, ಎದೆಗೆ, ಕೈಕಾಲು, ತೋಳು ಹಾಗೂ ಮಂಡಿಗೆ ಏಟಾತ್ತು ಎಂದರೆ ಸರಿ.

7. ನಂತರ ನಾವು ಮೂರು ಜನ ಸೇರಿ ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟೆವು ಎಂದರೆ, ನಾನು ಹಾಗೂ ನನ್ನ ಸ್ನೇಹಿತ ಕರೆದುಕೊಂಡು ಹೋದೆವು ಎಂದು ನುಡಿಯುತ್ತಾರೆ.

8. ನಂತರ ಮೈಲಾರಿಗೌಡರ ಮಗ ಲೋಕೇಶರವರಿಗೆ ಫೋನ್ ಮಾಡಿ ವಿಚಾರ ತಿಳಿಸಿದೆ ಎಂದರೆ ಸರಿ.

9. ಮೈಲಾರಿಗೌಡರು ಮಾರ್ಗಮಧ್ಯೆ ಮೃತರಾದ ವಿಚಾರ ಅವರ ಮಗ ತಿಳಿಸಿದರು ಎಂದರೆ ಸರಿಯಲ್ಲ.

10. ನಂತರ ದಿಃ 26.04.2022 ರಂದು ಚಾಸಾ - 5 ಮತ್ತು 6 ರವರ ಸಮಕ್ಷಮ ಪೊಲೀಸರು ನಾನು ತೋರಿಸಿದ ಸ್ಥಳದಲ್ಲಿ ಮಹಜರ್ ಮಾಡಿದರು ಎಂದರೆ ಸರಿ. ಸ್ಥಳದಲ್ಲಿ ಇದ್ದ ಕೆಎ.03.ಹೆಚ್ ಎ.3609 ರ ಬೈಕನ್ನು ಹಾಗೂ ಕೆಎ.11.ಎಂ.3749 ರ ಅಲ್ಟೋ ಕಾರನ್ನು ಅಮಾನತುಪಡಿಕೊಂಡರು ಎಂದರೆ ಸರಿ. ಆ ಬಗ್ಗೆ ನಿಪಿ - 2 ರಂತೆ ಮಹಜರ್ ಮಾಡಿರುತ್ತಾರೆ ಎಂದರೆ ಸರಿ. ಸ್ಥಳದಲ್ಲಿ ನಿಪಿ - 3 ರಂತೆ ಕಚ್ಚಾ ನಕಾಶೆ ತಯಾರಿಸಿರುತ್ತಾರೆ ಎಂದರೆ ಸರಿ. ನಿಪಿ - 2 ಹಾಗೂ 3 ಕ್ಕೆ ನಾನು ಸ್ಥಳದಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ.

<u>ಪಾಟೀ ಸವಾಲುಃಆರೋಪಿ ಪರ ವಕೀಲರಿಂದಃ</u>

1. ನಾನು, ಲೋಕೇಶ ಹಾಗೂ ಮೈಲಾರಿಗೌಡರು ಸ್ನೇಹಿತರು ಎಂದರೆ, ದಾಯಾದಿಗಳು ಎಂದು ನುಡಿಯುತ್ತಾರೆ.
2. ನಾನು ನನ್ನ ವಾಹನವನ್ನು ಉಪ್ಪಾರಗೇರಿಯಲ್ಲಿ ಸುಧಾಕರ್ ಗ್ಯಾರೇಜ್ ನಲ್ಲಿ ರಿಪೇರಿ ಮಾಡಿಸಿರುತ್ತೇನೆ.
3. ಬಿ.ಎಂ.ರಸ್ತೆಯಲ್ಲಿ ಹಲವಾರು ವಾಹನಗಳು ಓಡಾಡುತ್ತವೆ ಎಂದರೆ ಸರಿ.
4. ಉಪಾಪರಗೇರಿ ಮುಂದೆ ಜನಂದಣಿ ಜಾಸ್ತಿ ಇರುತ್ತದೆ ಎಂದರೆ ಸರಿ.
5. ಆರೋಪಿ ಅಪಘಾತವಾದ ಸ್ಥಳದಲ್ಲಿ ಹಂಪ್ಸ್ ಇದೆ ಎಂದರೆ ಸರಿ.
6. ವಾಹನ ಚಲಾಯಿಸಬೇಕಾದರೆ ಚಾಲಕನು ಅವರ ಮುಂದೆ ಮಾತ್ರ ನೋಡಿಕೊಂಡು ವಾಹನ ಚಲಾಯಿಸುತ್ತಾರೆ ಎಂದರೆ ಸರಿ. ಅವರ ಸುತ್ತ ಮುತ್ತ ನಡೆಯುವುದು ಅವರಿಗೆ ಗೊತ್ತಾಗುವುದಿಲ್ಲ ಎಂದರೆ ಸರಿ.
7. ಅಪಘಾತ ಯಾರ ಅಜಾಗರೂಕತೆಯಿಂದ ಆಯಿತು ಎಂದು ನಿಮಗೆ ಹೇಳಲು ಆಗುವುದಿಲ್ಲ ಎಂದರೆ ಸರಿ.

8. ಬೈಕಿನ ಯಾವ ಭಾಗಕ್ಕೆ ಡಿಕ್ಕಿಯಾಗಿರುತ್ತದೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸರಿ.

9. ನೀವು ಹೇಳುವಂತೆ ಆರೋಪಿತ ಅಪಘಾತವಾದ ಸ್ಥಳದಲ್ಲಿ ನೀವು ಇರಲಿಲ್ಲ ಎಂದರೆ ಸರಿಯಲ್ಲ.

10. ಮೃತ ಮೈಲಾರಿಗೌಡರು ಮಧ್ಯಪಾನ ಮಾಡುತ್ತಿದ್ದರು ಎಂದರೆ ಸರಿಯಲ್ಲ.

11. ಮಹಜರ್ ಮಾಡಲು ಪೊಲೀಸರು ನೊಟೀಸು ನೀಡಿರಲಿಲ್ಲ. ಮಹಜರ್ ನಲ್ಲಿ ಬರೆದ ವಿಚಾರಗಳು ನಿಮಗೆ ಗೊತ್ತಿಲ್ಲ ಎಂದರೆ, ಓದಿ ಹೇಳಿರುತ್ತಾರೆ ಈಗ ನೆನಪಿಲ್ಲ ಎಂದು ನುಡಿಯುತ್ತಾರೆ.

12. ಆರೋಪಿಯ ತಪ್ಪಿನಿಂದ ಯಾವುದೇ ಅಪಘಾತವಾಗದೇ ಇದ್ದರೂ, ನಿಮ್ಮ ಸಂಬಂಧಿಕರಾದ ಕಾರಣ ವಿಮಾ ಪರಿಹಾರದ ಹಣ ಪಡೆಯಲು ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು

ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು, ಪಿರಿಯಾಪಟ್ಟಣ.